ಉದಯವಾಣಿ

**Sunday 05th November 2023, Page No.04**

**IT Conference at RV Engineering College**

# ಆರ್‌ವಿ ಎಂಜಿನಿಯರಿಂಗ್ ಕಾಲೇಜಲ್ಲಿ ಐಟಿ ಸಮ್ಮೇಳನ



ಬೆಂಗಳೂರು-ಮೈಸೂರು ಮುಖ್ಯ ರಸ್ತೆಯಲ್ಲಿರುವ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಸಮ್ಮೇಳನದಲ್ಲಿ ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಡಾ.ಎಸ್.ಜಿ.ಶ್ರೀವಾಣಿ ಇದ್ದರು.

**ಕೆಂಗೇರಿ:** ಸುಸ್ಥಿರ ಪರಿಹಾರಗಳಿಗಾಗಿ ಕಂಪ್ಯೂಟೇಷನಲ್ ಸಿಸ್ಟಮ್ ಮತ್ತು ಮಾಹಿತಿ ತಂತ್ರಜ್ಞಾನ ಎಂಬ ವಿಷಯದ ಕುರಿತು ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಸಹಯೋಗದಲ್ಲಿ ಐಇಇಇ ಕಂಪನಿಯ 7ನೇ ಅಂತಾರಾಷ್ಟ್ರೀಯ ಸಮ್ಮೇಳನ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜನೆಗೊಂಡಿತ್ತು.

ಬೆಂಗಳೂರು-ಮೈಸೂರು ಮುಖ್ಯ ರಸ್ತೆಯಲ್ಲಿರುವ ಕಾಲೇಜಿನಲ್ಲಿ ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನ ಗಣಿತ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಭರತ್ ಅವರಿಂದ ವೇದಘೋಷದೊಂದಿಗೆ ಸಮ್ಮೇಳನದ ಸಭಾ ಕಾರ್ಯಕ್ರಮ ಆರಂಭಗೊಂಡಿತು.

ನವೀಕರಿಸಬಹುದಾದ ಶಕ್ತಿ, ರೋಬಾಟಿಕ್ಸ್, ಕಂಪ್ಯೂಟಿಂಗ್, ಸಂವಹನ, ಇ-ಮೊಬಿಲಿಟಿ, ದೇಶ-ವಿದೇಶದ ಮತ್ತು ಎಂಬೆಡೆಡ್ ಸಿಸ್ಟಮ್ ಎಂಬುದು ಸಮಾವೇಶದ ಮುಖ್ಯ ವಿಷಯವಾಗಿದ್ದು, ದೇಶ-ವಿದೇಶಗಳಿಂದ ಆಗಮಿಸಿದ ತಜ್ಞರಿಂದ 187 ಪ್ರಬಂಧಗಳು ಮಂಡನೆಯಾಯಿತು. ಸಮಾರೋಪ ಅಧ್ಯಕ್ಷೀಯ ಭಾಷಣ ಡಾ.ಎಸ್.ಜಿ. ಶ್ರೀವಾಣಿ ಮಾಡಿದರು. ಆರ್‌ವಿಸಿಇ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ ಸ್ವಾಗತಿಸಿದರು. ಎನ್‌ಆರ್‌ಐ ಕೋಟಾದಡಿ ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಎಸ್.ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು. ಸಿಲಿಕಾನ್ ಎಂಜಿನಿಯರಿಂಗ್‌ನ ಉಪಾಧ್ಯಕ್ಷ ಸಂಜಯ, ಸಿ.ಆರ್. ಶ್ರೀನಿವಾಸ್, ಡಾ.ದೀಪಾ ಶೆಣೈ, ಪ್ರೊ.ರಾಜಾ ವಿದ್ಯಾ, ಉಪ ಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ ಉಪಸ್ಥಿತರಿದ್ದರು.